ಅವಲಂಬಿಸುವಂತೆ ಮಾಡಿಕೊಂಡಿದ್ದಳು. ಈಗೊಂದೆರಡು ವರ್ಷಗಳಿಂದ ಗಂಗಕ್ಕನ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು. ಒಂಟಿಯಾಗಿ ಬದುಕುತ್ತಿದ್ದ ಗಂಗಕ್ಕ ಮನೆ ಬೀಗ ಹಾಕಿ ಎಲ್ಲಿಗಾದರೂ ಹೋಗಬೇಕೆಂದರೆ ದೇವಿಯದೇ ದೇಖರೇಖಿ. ಇದ್ದೊಂದು ಆಕಳಿಗೆ ಹುಲ್ಲು ನೀರು ತೋರಿಸುವುದು, ಹೊತ್ತಿಗೆ ಸರೀ ಹಾಲು ಕರೆದು ಡೇರಿಗೆ ತಲುಪಿಸುವುದು, ಅಂಗಳದ ಹಿತ್ತಲುಗಿಡಕ್ಕೆಲ್ಲಾ ನೀರುಣಿಸುವುದು... ಅಂತೂ ಗಂಗಕ್ಕನಿಗೆ ದೇವಿಯೊಬ್ಬಳಿದ್ದರೆ ತಲೆಬಿಸಿಯಿಲ್ಲ.

ಗಂಗಕ್ಕನ ಮನೆ ಮುಂದಿನ ರಸ್ತೆಯೊಂದು ಜಲ್ಲಿ ಕಡಿ ಹಾಕಿಕೊಂಡು, ಶಿಲಾಯುಗದ ಪಳೆಯುಳಿಕೆಯ ಲಕ್ಷಣ ಹೊತ್ತು ಮಲಗಿ ಯಾರ ಲೆಕ್ಕಕ್ಕೂ ಸಿಗದಷ್ಟು ವರ್ಷಗಳಾಗಿವೆ. ಈಗೊಂದಾರು ತಿಂಗಳ ಹಿಂದೆ ಆ ರಸ್ತೆಗೆ ಲೋಡುಗಟ್ಟಳೆ ಮಣ್ಣು ಸುರಿದು ಹೋದಾಗಲೇ ತಮ್ಮನೆ ಮುಂದಿನ ರಸ್ತೆಯೂ ಡಾಂಬರಾದೀತು ಎಂದು ಗಂಗಕ್ಕ ಆಸೆಪಟ್ಟಿದ್ದಳು. ಆಸೆ ಪಟ್ಟಿದ್ದೆಲ್ಲಾ ನಿಜವಾಗಿಬಿಟ್ಟಿದ್ದರೆ ಜಗತ್ತು ಹೀಗೆಲ್ಲಿರುತ್ತಿತ್ತು? ಆ ಆಸೆಯನ್ನು ಅದುಮಿಡಲಾರದೆ ಆಕೆ ಊರಿನ ಕೆಲವರಲ್ಲಿ ಹೇಳಿಕೊಂಡೂ ಆಗಿತ್ತು. 'ಅಯ್ಯೋ ಆ ರಸ್ತೆ ಅಪ್ಪದಲ್ಲ, ಹೋಪದಲ್ಲ ಗಂಗಕ್ಕ. ಯಾಣದ ಘಟ್ಟ ಇಳಿಯಲ್ಲೆ ಹೊಸ ಹ್ಯಾವೇ ಆಪ್ಪದಡಲೆ... ಆ ಹ್ಯಾವೇ ಆದ್ರೆ ನಿಮ್ಮನೆ ಮುಂದೇ ಹೋಗಿ ಉರ್ದು ಶಾಲೆ ಹತ್ರೆ ಕೂಡದು. ಆಗ ಶಾಲೆ ಕಂಪೌಂಡೇ ಅರ್ಧ ಹೋಗ್ತಡ. ಹಾಂಗಾಂಗಿ ಅವರದ್ದೆಲ್ಲಾ ತಕರಾರು. ಅವರ ತಕರಾರು ಮುಗಿಯದಲ್ಲ, ನಿಮ್ಮನೆ ಎದುರಿನ ರಸ್ತೆ ಅಪ್ಪದಲ್ಲ' ಎಂದು ಊರಿನ ಹಲವರ ಬಾಯಲ್ಲಿ ಬಂದಿದ್ದರಿಂದ ಹೊಸ ರಸ್ತೆಯ ಆಸೆ ಬಿಟ್ಟಿದ್ದಳು. ಹಾಗೆಂದು ಆ ರಸ್ತೆಯಲ್ಲಿ ವಾಹನಗಳ ಓಡಾಡ ಸಾಕಷ್ಟು ಇತ್ತಾಗಿ, ರಸ್ತೆಗೆ ಸುರಿದ ಮಣ್ಣಿನಿಂದ ಬ್ರಹ್ಮಾಂಡದಷ್ಟು ದೂಳು ಪ್ರತಿ ಕ್ಷಣ ಏಳುತ್ತಿತ್ತು. ಅವಳ ಅಂಗಳದ ಸರ್ವವೂ ಕೆಂಬಣ್ಣಕ್ಕೆ ತಿರುಗಿ, ಯಾವುದೇ ಬಣ್ಣದ ಬಟ್ಟೆಯನ್ನು ತೊಳೆದು ಅಂಗಳದಲ್ಲಿ ಒಣಗಿಸಿದರೂ ಅವನ್ನು ಕೆಂಬಣ್ಣಕ್ಕೆ ತಿರುಗಿಸಿಕೊಡುವ ಉಚಿತ ಡೈಯಿಂಗ್ ಸೌಲಭ್ಯ ಒದಗಿ ಬಂದಿತ್ತು. ಹಾಗಾಗಿ ತಮ್ಮನೆ ಮುಂದಿನ ರಸ್ತೆಗೂ ಕರಿಬಣ್ಣ ಬಳಿಯುತ್ತಾರೆ ಎಂಬ ದೇವಿಯ ಸುದ್ದಿ ಸಹಜವಾಗಿ ಗಂಗಕ್ಕನಿಗೆ ಸಂತಸ ತಂದಿತ್ತು. ದೇವಿಯ ವಿಚಾರಣೆ ಆರಂಭಿಸಿದಳು.

'ಯಾರೆ ಹೇಳಿದ್ದು ನಿಂಗೆ ರಸ್ತೆ ಸುದ್ದೀನಾ?'

'ನಾ ಯಂತ ಹೇಳೂದ್ರ... ಪ್ಯಾಟೆ ರಸ್ತೆ ಅಗಲ ಮಾಡ ಕಂತ್ರಾಟು ತಕಂಡವ್ರೇ ಹೇಳೀರು. ಮುಂದೆ ಈ ದೂಳ್ ಹಿಡ್ಕ್ ರಸ್ತೀಗೂ ಟಾರು ಬಳೂದೇಯ ಹೇಳಿ.'

'ಅಯ್ಯೋ ಹೌದನೇ! ರಸ್ತೆ ಕೆಲಸದವ್ರು ನಿಂಗೆಲ್ಲಿ ಸಿಕ್ಕಿದ್ರು? ನಿನ್ಹತ್ರೆ ಎಂತಕ್ಕೆ ಹೇಳಿದ್ರೆ?' ಗಂಗಕ್ಕನಿಗೆ ಮತ್ತಷ್ಟು ಕುತೂಹಲ.

'ಇಗಳಿ! ನೆಂಟ್ರ ಮನೆಲ್ಲಿ ಕುಂತ್ರೆ ಮನೆ ಬುಡದ್ದೇ ಕಾಣೂದಿಲ್ಲ. ಮನೆಯಾಚಿನ್ ಗುಡ್ಡೆ ಮ್ಯಾಲೆ ಬಿಡಾರ ಹೂಡೀರಲ್ಲ ಗಂಗಮ್ಮ... ನಿನ್ನೆ ಸಂಜಿ ಕಡೀಗ್ ಬಂದವ್ರ್, ನೀವು, ನಿಮಗೆ ಗೊತ್ತಿಲ್ಲೇನ ಬಿಡಿ' ಎಂದು ಒಡತಿಯ ಅಜ್ಞಾನದ ಕಾರಣವನ್ನು ವಿಶ್ಲೇಷಿಸಿದಳು.

'ಗೊತ್ತಾತು ಬಿಡು. ಹಾಂಗಾರೆ ರಾತ್ರೆಲ್ಲಾ ಅವ್ರದ್ದೇ ಗೌಜಿ. ಆ ಶಬ್ದಕ್ಕೆ, ಹೋದ ಶುಕ್ರವಾರವೂ ಚೌಡಿಗೆ ಕಾಯಿ ಒಡೆದಾಗ್ಲಿಲ್ಲ ಹೇಳದೆಲ್ಲಾ ನೆನಪಾಗೋತು ಮಾರಾಯ್ತಿ' ಎಂಬ ಗಂಗಕ್ಕನ ಮಾತಿಗೆ ದೇವಿ ಬಿದ್ದುಬಿದ್ದು ನಗತೊಡಗಿದಳು.

★★★

ಬೆಳಗಿನ ತಿಂಡಿಯ ತಯಾರಿಯಲ್ಲಿದ್ದ ಗಂಗಕ್ಕನಿಗೆ ಅಂಗಳದ ಗೇಟಿನ ಬಳಿ ಯಾರೋ ಕರೆದಂತೆನಿಸಿತು. ಬೆಳ್ಳಂಬೆಳಗ್ಗೆ ಯಾರಿದ್ದಾರೆ ತನ್ನ ಮನೆ ಬಾಗಿಲಿಗೆ ಬರುವವರು ಎಂಬ